**ಪತ್ರಿಕಾ ಪ್ರಕಟಣೆ**

ವಿಜಯಪುರ

ದಿನಾಂಕ: 18.07.2021.

**1] ಸಂಚಾರಿ ಪೊಲೀಸ ಠಾಣೆ ಗುನ್ನೆ ನಂ: 87/2021 ಕಲಂ: 279, 337, 304(ಎ) ಐ.ಪಿ.ಸಿ. & 187 ಎಮ್.ವ್ಹಿ ಆ್ಯಕ್ಟ**

ದಿನಾಂಕ: 17.07.2021 ರಂದು 16.30 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಲಾರಿ ನಂ; ಜಿಜೆ;01 ಸಿವಿ;4172 ನೇದ್ದರ ಚಾಲಕ ಶಿವಾನಾರಾಯಣ ಮೋಲರಾಮ ವೃತ್ತಿ;ಚಾಲಕ ಸಾ॥ಮಧಸಾರ ತಾ॥ಬೈತು ಜಿ॥ಭರಮೇರಾ ರಜಸ್ಥಾನ ರಾಜ್ಯ ಈತನು ತಾನು ನಡೆಸುತ್ತಿದ್ದ ಲಾರಿಯನ್ನು ಸೋಲಾಪುರ ಬೈಪಾಸ ಕಡೆಯಿಂದ ಇಂಡಿ ಬೈಪಾಸ ಕಡೆಗೆ ಹೋಗುವ ಸಲುವಾಗಿ ಅತೀ ಜೋರಿನಿಂದ ಹಾಗೂ ನಿಸ್ಕಾಳಜೀತನದಿಂದ ನಡೆಯಿಸಿಕೊಂಡು ಬಂದವನೆ ಎನ್‌ಎಚ್ 52 ರೋಡ ಸಂಸ್ಕೃತಿ ಕಾಲೋನಿಯ ಕ್ರಾಸ ಹತ್ತಿರ ಇದರಲ್ಲಿಯ ಖಾಜಾಮೈನೋದ್ದಿನ್ ತಂ; ಹಾಸಿಮಸಾಬ ಹುದ್ದಾರ ವಯಾ;59 ವರ್ಷ ವೃತ್ತಿ; ಮುಖ್ಯಶಿಕ್ಷಕರು ಜಾತಿ;ಮುಸ್ಲಿಮ್ ಸಾ॥ಕಿರ್ತಿನಗರ ಮೃತುಜಖಾದ್ರಿ ಮಸಿದಿಯ ಹತ್ತಿರ ವಿಜಯಪುರ ಇತನು ತಾನು ನಡೆಸುತ್ತಿದ್ದ ಸ್ಕೂಟರ ಮೊಟಾರ ಸೈಕಲ ನಂ; ಕೆಎ;28 ಇಎಚ್;6259 ನೇದ್ದರ ಮೇಲೆ ಹಿಂದೆ ಸಂಗನಗೌಡ ಹಣಮಂತರಾಯ ಪಾಟೀಲ ವಯಾ;41 ವರ್ಷ ವೃತ್ತಿ;ಸಹಶಿಕ್ಷಕ ಜಾತಿ;ಹಿಂದು(ಗಾಣಿಗ) ಸಾ॥ಬೋಮ್ಮನಹಳ್ಳಿ ತಾ॥ಸಿಂದಗಿ ಜಿ॥ವಿಜಯಪುರ ಇತನಿಗೆ ಕೂಡಿಸಿಕೊಂಡು ಸೊಲಾಪೂರ ಬೈಪಾಸ ಕಡೆಯಿಂದ ಇಂಡಿ ಬೈಪಾಸ ಕಡೆಗೆ ಹೊಗುವ ಸಲುವಾಗಿ ಹೊರಟಾಗಾ ಹಿಂದಿನಿಂದ ಲಾರಿ ಚಾಲಕನು ಸ್ಕೂಟರ ಮೊಟಾರ ಸೈಕಲದವರಿಗೆ ಹಾಯಿಸಿ ಬಿಳಿಸಿ ಅಪಾಘತ ಪಡಿಸಿ ಬಿಳಿಸಿ ಇಬ್ಬರ ಮೇಲೆ ಲಾರಿ ಹತ್ತಿಸಿ ಇಬ್ಬರಿಗೂ ಭಾರಿ ಗಾಯ ಪೆಟ್ಟು ಪಡಿಸಿ ಅಪಾಘತ ಸ್ಥಳದಲ್ಲಿಯೇ ಮರಣ ಪಡಿಸಿ ಲಾರಿ ಚಾಲಕ ಸದರ ಸಂಗತಿ ಪೊಲೀಸ್ ಠಾಣೆಗೆ ತಿಳಿಸಿದೆ ಹೊದ ಆರೋಪ, ಈ ಬಗ್ಗೆ ಜೈಹಿರಅಬ್ಬಾಸ್ ಮಹ್ಮದಅಲಿ ಬಡೆಮಗೊಳ ಸಾ॥ ಸ್ವಾತಂತ್ರ್ಯ ಯೋಧರ, ಕಾಲೋನಿ, ವಿಜಯಪುರ, ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 17.07.2021 ರಂದು ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಬಬಲೇಶ್ವರ ಪೊಲೀಸ ಠಾಣೆ ಗುನ್ನಾ. ನಂ: 99/2021 ಕಲಂ: 279, 304 (ಎ) ಐಪಿಸಿ**

ದಿನಾಂಕ 17.07.2021 ರಂದು 13.10 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತನಾದ ಸಿದರಾಯ ಬಸಪ್ಪ ಕೊಕಟನೂರ ಸಾ: ಕಾತ್ರಾಳ ತಾ: ಬಬಲೇಶ್ವರ ಮೋಟಾರ್ ಸೈಕಲ್ ನಂ: ಕೆಎ:28 ಇಎಸ್:7621 ನೇದ್ದರ ಚಾಲಕ. ಈತನು ತನ್ನ ಮೋಟಾರ್ ಸೈಕಲ್ ನೇದ್ದನ್ನು ಕಾತ್ರಾಳ ಕಡೆಯಿಂದ ಅರ್ಜುಣಗಿ ಕಡೆಗೆ ಅತೀ ವೇಗವಾಗಿ ಮತ್ತು ನೀರ್ಲಕ್ಷತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ಚಲಾಯಿಸಿಕೊಂಡು ಬಂದು ಪಿರ್ಯಾದಿಯ ತೊಟದ ಮನೆಯ ಹತ್ತಿರ ರಸ್ತೆಯ ಎಡದಂಡೆಗೆ ನಡೆದುಕೊಂಡು ಬರುತ್ತಿದ್ದ ಪಿರ್ಯಾದಿಯ ತಾಯಿ ಸುಂದ್ರವ್ವ ಲಕ್ಷ್ಮಣ ಪಡಸಲಗಿ ವಯಾ; 52 ವರ್ಷ ಸಾ: ಕಾತ್ರಾಳ ಇವಳಿಗೆ ಹಿಂದಿನಿಂದ ಮೋಟಾರ್ ಸೈಕಲ್‌ನ್ನು ಹಾಯಿಸಿ ಅಪಘಾತಪಡಿಸಿ ಅವಳ ತಲೆಗೆ ಭಾರಿ ಗಾಯಪೆಟ್ಟು ಪಡಿಸಿದ್ದು, ಅದರ ಚಿಕಿತ್ಸೆಗಾಗಿ ಅವಳಿಗೆ ಆಸ್ಪತ್ರೆಗೆ ಕರೆದುಕೊಂಡು ಬರುವಾಗ ದಾರಿ ಮಧ್ಯದಲ್ಲಿ ತೀರಿಕೊಂಡಿದ್ದು, ಸದರಿ ಅಪಘಾತಕ್ಕೆ ಸಿದರಾಯ ತಂದೆ ಬಸಪ್ಪ ಕೊಕಟನೂರ ಸಾ: ಕಾತ್ರಾಳ ತಾ: ಬಬಲೇಶ್ವರ ಈತನ ಅತೀ ವೇಗ ಮತ್ತು ನೀರ್ಲಕ್ಷತನದ ಚಾಲನೆಯೆ ಕಾರಣ ಇದ್ದು ಈ ಬಗ್ಗೆ ಅವನ ಮೇಲೆ ಕಾನೂನು ಕ್ರಮ ಕೈಕೊಳ್ಳಲು ನನ್ನ ಪಿರ್ಯಾದಿ ಇರುತ್ತದೆ ಅಂತಾ ನಮೂದು ಅದೆ. ಈ ಬಗ್ಗೆ ಸುರೇಶ ಲಕ್ಷ್ಮಣ ಪಡಸಲಗಿ ಸಾ: ಕಾತ್ರಾಳ ತಾ: ಬಬಲೇಶ್ವರ. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 17.07,2021 ರಂದು ಬಬಲೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಬಬಲೇಶ್ವರ ಪೊಲೀಸ ಠಾಣೆ ಗುನ್ನಾ. ನಂ: 100/2021 ಕಲಂ: 87 ಕೆ.ಪಿ.ಆ್ಯಕ್ಟ**

ದಿನಾಂಕ 17.07.2021 ರಂದು 16:15 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತರಾದ 1) ವಿಶ್ವನಾಥ ಶಿವಪ್ಪ ಕುದರಿ ಸಾ: ಸಾರವಾಡ ಹಾಗೂ ಇನ್ನು 13 ಜನರು ಇವರು ದದಾಮಟ್ಟಿಗೆ ಹೋಗುವ ಸಾರ್ವಜನಿಕ ರಸ್ತೆಯ ಉತ್ತರ ದಿಕ್ಕಿಗೆ ಇರುವ ಹಳ್ಳದಲ್ಲಿ ಸಾರ್ವಜನಿಕ ಸ್ಥಳದಲ್ಲಿ ಕುಳಿತು ತಮ್ಮ ತಮ್ಮ ಫಾಯಿದೆಗೋಸ್ಕರ ಇಸ್ಪಿಟ್ ಎಲೆಗಳ ಸಹಾಯದಿಂದ ಪಣಕ್ಕೆ ಹಣ ಕಟ್ಟಿ ಅಂದರ ಬಾಹರ್ ಅನ್ನುವ ಇಸ್ಪೀಟ್ ಜೂಜಾಟ ಆಡುತ್ತಿದ್ದಾಗ ಸಿಕ್ಕಿದ್ದು ಇರುತ್ತದೆ. ಜಪ್ತಾದ ಮಾಲು: 1) 52 ಇಸ್ಪೀಟ್ ಎಲೆಗಳು. ಅಕಿ–00 ರೂ. 2) ರೋಖ ಹಣ 37000/– ರೂ. ಈ ಬಗ್ಗೆ ಸ:ತ: ಸೋಮನಗೌಡ ಬಿ ಗೌಡರ ಪಿಎಸ್ಐ ಬಬಲೇಶ್ವರ ಪಿಎಸ್ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 17.07,2021 ರಂದು ಬಬಲೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**4] ಮಹಿಳಾ ಪೊಲೀಸ ಠಾಣೆ ಗುನ್ನಾ. ನಂ: 82/2021 ಕಲಂ: ಮಹಿಳೆ ಕಾಣೆ**

ದಿನಾಂಕ: 16.07.2021 ರಂದು 11.30 ಗಂಟೆ ಸುಮಾರಿಗೆ ಇದರಲ್ಲಿ ಕಾಣೆಯಾದ ಮೀನಾಜ್ ಗಂಡ ಶಾಹಿದ ಕಾರಜೋಳ ವಯಾ 21 ವರ್ಷ ಸಾ॥ ಜುಮನಾಳ ಇವಳು ಅಂಜುಮನ್ ಶಾಲೆಯ ಗೇಟ ಹತ್ತಿರ ಬಿಟ್ಟು ನನಗೆ ಹೊಟ್ಟೆ ನೋವು ಆಗುತ್ತಿದೆ ನಾನು ಮನೆಗೆ ಹೋಗುತ್ತೇನೆ ಅಂತಾ ಹೇಳಿ ಹೋದವಳು ಪರ್ತ ಮನೆಗೆ ಬಾರದೇ ಎಲ್ಲಿಯೋ ಹೋಗಿ ಕಾಣೆಯಾಗಿರುತ್ತಾಳೆ. ಈ ಬಗ್ಗೆ ಬಾಬುಸಾಬ ಹುಸೇನಸಾಬ ರೋಜೆ ಸಾ॥ ಜುಮನಾಳ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 17.07,2021 ರಂದು ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.